ಮಟ್ಟದಲ್ಲಿ ಎಷ್ಟು ಕೊಟ್ಟಿದ್ದೀರಿ? ತಾಲ್ಲೂಕು ಮಟ್ಟದಲ್ಲಿ ಎಷ್ಟು ಕೊಟ್ಟಿದ್ದೀರಿ? ಅದರಲ್ಲಿ ಕನ್ನಡಿಗರಿಗೆ ಎಷ್ಟು ಜನಕ್ಕೆ ಕೊಟ್ಟಿದ್ದೀರಿ? ಕನ್ನಡೇತರರಿಗೆ ಎಷ್ಟು ಜನಕ್ಕೆ ಕೊಟ್ಟಿದ್ದೀರಿ? ಎನ್ನುವ ಅಂಕಿ ಅಂಶವನ್ನು ಕೊಟ್ಟರೆ ಬಹಳ ಒಳ್ಳೆಯದು.

ಅಧ್ಯಕ್ಷರು:- ಅದರ ಬಗ್ಗೆ ನೋಟೀಸ್ ಕೊಟ್ಟು ಪೂರ್ಣ ವಿವರಗಳನ್ನು ಇನ್ನೊಂದು ಸಾರಿ ತರಿಸಿಕೊಳ್ಳಿ.

ಶ್ರೀ ಬಿ.ಎ. ಮೊಯಿಯುದ್ದೀನ್:- ಶೆಡ್ಡುಗಳ ಅಲಾಟ್‌ಮೆಂಟಿಗೆ ಒಂದು ನಿಯಮಾವಳಿ ಇದೆ, ಅದರ ಪ್ರಕಾರ ಶೆಡ್ಡುಗಳನ್ನು ಹಂಚಲಾಗಿದೆ. ಕನ್ನಡಿಗರಿಗೆ ಮತ್ತು ಕನ್ನಡೇತರರಿಗೆ ಎಂಬ ಮೀಸಲಾತಿ ಇದರಲ್ಲಿ ಇಲ್ಲ.

ಶ್ರೀ ಟಿ.ಬಿ.ಜಯಚಂದ್ರ:- ಶೆಡ್ಡುಗಳು ಹೆಚ್ಚಾಗಿ ಕನ್ನಡೇತರರಿಗೆ ಸಿಕ್ಕಿದೆಯೇ ಹೊರತು ಕನ್ನಡಿಗರಿಗೆ ಸಿಕ್ಕಿರುವುದಿಲ್ಲ.

ಶ್ರೀ ಬಿ.ಎ. ಮೊಯಿಯುದ್ದೀನ್:- ಇದರ ಅಂಕಿ ಅಂಶಗಳನ್ನು ನಾನು ಅವರಿಗೆ ಒದಗಿಸಿಕೊಡುತ್ತೇನೆ.

ಶ್ರೀ ಸಿ.ಹೆಚ್.ವಿಜಯಶಂಕರ್:- ಮಾನ್ಯ ಗೌರವಾನ್ವಿತ ಸದಸ್ಯರು ಮಾತನಾಡುತ್ತಾ ಹೊಲಗೇರಿ ಎನ್ನುವ ಪದವನ್ನು ಬಳಸಲು, ಹೊಲೆಗೇರಿಗಳು ಎಲ್ಲಿವೆಯೆಂದು ನನಗೆ ಗೊತ್ತಿಲ್ಲ, ಹರಿಜನರ ಕೇರಿಗಳನ್ನು ಗಿರಿಜನರ ಕೇರಿಗಳನ್ನು ನಾನು ನೋಡಿದ್ದೇನೆ, ಅದಕ್ಕಾಗಿ ಅವರು ಉಪಯೋಗ ಮಾಡಿರುವ ★★ ಪದವನ್ನು ಕಡತದಿಂದ ತೆಗೆದುಹಾಕಬೇಕೆಂದು ತಮ್ಮಲ್ಲಿ ಮನವಿ ಮಾಡುತ್ತೇನೆ. ಮತ್ತು ಅವರು ಆ ಪದವನ್ನು ವಾಪಸ್ ಪಡೆಯಬೇಕೆಂದು ನಾನು ಕೇಳುತ್ತೇನೆ.

ಅಧ್ಯಕ್ಷರು:- ಹರಿಜನ ಗಿರಿಜನ ಎನ್ನುವುದು ಕೃತಕವಾದ ಪದ, ಹರಿಜನ-ಗಿರಿಜನ ಎಂದು ಯಾರೂ ಇಲ್ಲ. ಪರಿಶಿಷ್ಟ ಜಾತಿಯವರು ಮತ್ತು ಪರಿಶಿಷ್ಟ ಜನಾಂಗದವರು ಎಂದು ಇದ್ದಾರೆ, ಹರಿಜನ-ಗಿರಿಜನ ಎಂದು ಬಳಸುವುದೇ ಅಕ್ಷಮ್ಯ ಅಪರಾಧ, ಅದನ್ನು ಉಪಯೋಗಿಸಬಾರದು. ★★ ಎಂದು ಮಾತನಾಡುವುದು ಸತ್ಯವಾಗುತ್ತದೆ. ಆದರೆ, ಅದು ರೆಕಾರ್ಡ್‌ಗೆ ಹೋಗಬೇಕೋ ಬೇಡವೋ ಎಂದು ನಾನು ಆಮೇಲೆ ಯೋಚನೆ ಮಾಡುತ್ತೇನೆ.

ವಿಷಯ:- 1995-96ನೇ ಸಾಲಿನಲ್ಲಿ ಕರ್ನಾಟಕ ರಾಜ್ಯದಲ್ಲಿ ಮಂಜೂರಾದ ಹಿಂದುಳಿದ ವರ್ಗಗಳ ಹಾಗೂ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ವರ್ಗಗಳ ವಿದ್ಯಾರ್ಥಿ ನಿಲಯಗಳು.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 71 (586)

★★ ಅಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದುಹಾಕಲಾಗಿದೆ.

ಶ್ರೀ ಶ್ರೀ ಮಂಜುನಾಥ ಸಿ.ಕುನ್ನೂರ (ಶಿಗ್ಗಾಂವ):- ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) 1995-96ನೇ ಸಾಲಿನಲ್ಲಿ ಕರ್ನಾಟಕ ರಾಜ್ಯದಲ್ಲಿ ಮಂಜೂರಾದ ಹಿಂದುಳಿದ ವರ್ಗಗಳ ಹಾಗೂ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ವರ್ಗಗಳ ವಿದ್ಯಾರ್ಥಿ ನಿಲಯಗಳ ಸಂಖ್ಯೆ ಎಷ್ಟು? (ವಿವರ ಕೊಡುವುದು)

ಆ) ಸದರಿ ವಿದ್ಯಾರ್ಥಿ ನಿಲಯಗಳನ್ನು ಯಾವ ಆಧಾರದ ಮೇಲೆ ಮಂಜೂರು ಮಾಡಲಾಗಿದೆ?

ಶ್ರೀ ಕೆ.ಎಂ.ಕೃಷ್ಣರೆಡ್ಡಿ (ಸಮಾಜ ಕಲ್ಯಾಣ ಸಚಿವರು):-

ಅ) ಸಮಾಜ ಕಲ್ಯಾಣ ಇಲಾಖೆ

1995-96ನೇ ಸಾಲಿನಲ್ಲಿ ಪರಿಶಿಷ್ಟ ಜಾತಿ; ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳಿಗೆ ಒಟ್ಟಾರೆ 159 ವಿದ್ಯಾಥಿ ನಿಲಯಗಳನ್ನು ಪ್ರಾರಂಭಿಸಲು ಮಂಜೂರಾತಿ ನೀಡಿದೆ. ವಿವರಗಳು ಈ ಕೆಳಕಂಡಂತೆ ಇವೆ:-

ಮೆಟ್ರಿಕ್ ನಂತರದ	-	36
ಮೆಟ್ರಿಕ್ ಪೂರ್ವ (ಪ.ಜಾ)	-	104
ಮೆಟ್ರಿಕ್ ಪೂರ್ವ (ಪ.ವ)	-	19
ಒಟ್ಟು		159

ಹಿಂದುಳಿದ ವರ್ಗಗಳ ಮತ್ತು ಅಲ್ಪ ಸಂಖ್ಯಾತರ ಇಲಾಖೆ

1995-96ನೇ ಸಾಲಿನಲ್ಲಿ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ಒಟ್ಟಾರೆ 76 ವಿದ್ಯಾರ್ಥಿ ನಿಲಯಗಳನ್ನು ಪ್ರಾರಂಭಿಸಲು ಮಂಜೂರಾತಿ ನೀಡಿದೆ. ವಿವರಗಳು ಈ ಕೆಳಕಂಡಂತಿವೆ:-

ಮೆಟ್ರಿಕ್ ನಂತರದ	-	24
ಮೆಟ್ರಿಕ್ ಪೂರ್ವ	-	52
ಒಟ್ಟು		76

ಆ) ವಿದ್ಯಾರ್ಥಿ ನಿಲಯಗಳಿಗಾಗಿ ಬೇಡಿಕೆ, ವಿದ್ಯಾರ್ಥಿಗಳ ಲಭ್ಯತೆ ಹಾಗೂ ಹಣದ ಲಭ್ಯತೆ ಆಧರಿಸಿ ಮಂಜೂರು ಮಾಡಲಾಗಿದೆ.

ಶ್ರೀ ಶ್ರೀ ಮಂಜುನಾಥ ಸಿ.ಕುನ್ನೂರ:- ಮಾನ್ಯ ಅಧ್ಯಕ್ಷರೆ, 1995-96ನೇ ಸಾಲಿನಲ್ಲಿ 159 ಎಸ್.ಸಿ; ಎಸ್.ಟಿ., ಹಾಸ್ಟೆಲ್‌ಗಳನ್ನು ಮತ್ತು 76 ಬಿ.ಸಿ.ಎಂ. ಹಾಸ್ಟೆಲ್‌ಗಳನ್ನು

ಮಂಜೂರು ಮಾಡಲಾಗಿದೆ. ವಿದ್ಯಾರ್ಥಿನಿಲಯಗಳ ಬೇಡಿಕೆ ಮತ್ತು ವಿದ್ಯಾರ್ಥಿಗಳ ಲಭ್ಯತೆ ಆಧಾರದ ಮೇಲೆ ಈ ಹಾಸ್ಟೆಲ್‌ಗಳನ್ನು ಮಂಜೂರು ಮಾಡಲಾಗಿದೆಯೆಂದು ಸರ್ಕಾರ ಹೇಳಿದೆ. ನನ್ನ ಮತ ಕ್ಷೇತ್ರದ ಶಿಗ್ಗಾಂ ತಾಲ್ಲೂಕು ನಾರಾಯಣಪುರ ಮತ್ತು ಸವಣೂರು ತಾಲ್ಲೂಕು ಕಡಕೋಳದಲ್ಲಿ ವಿದ್ಯಾರ್ಥಿಗಳ ಲಭ್ಯತೆ ಆಧಾರದ ಮೇಲೆ ಹಾಸ್ಟೆಲ್‌ಗಳು ಬೇಕೆಂದು ನಾನು ಬೇಡಿಕೆ ಸಲ್ಲಿಸಿದ್ದೆ. 235 ಹಾಸ್ಟೆಲ್ ಕೊಟ್ಟಿರುವಾಗ, ಒಂದು ವಿಧಾನಸಭಾ ಕ್ಷೇತ್ರಕ್ಕೆ ಒಂದೊಂದು ಹಾಸ್ಟೆಲ್ ಕೊಟ್ಟಿದ್ದರೂ ಇನ್ನೂ ಉಳಿಯುತ್ತಿತ್ತು. ಆದ್ದರಿಂದ, ಇವತ್ತು ಹಾಸ್ಟೆಲ್‌ಗಳನ್ನು ಸರಿಯಾದ ರೀತಿಯಲ್ಲಿ ಹಂಚಿಲ್ಲವೆಂಬ ವಿಚಾರವನ್ನು ಹೇಳುತ್ತಾ, ನಮ್ಮ ಕ್ಷೇತ್ರದಲ್ಲಿ ವಿದ್ಯಾರ್ಥಿಗಳ ಲಭ್ಯತೆ ಇರುವುದರಿಂದ ನನ್ನ ಬೇಡಿಕೆಗೆ ಅನುಸಾರವಾಗಿ ಹಾಸ್ಟೆಲ್‌ಗಳನ್ನು ಮಂಜೂರು ಮಾಡಬೇಕೆಂದು ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ಕೆ.ಎಂ.ಕೃಷ್ಣರೆಡ್ಡಿ:- ಮಾನ್ಯ ಸದಸ್ಯರ ಬೇಡಿಕೆಯಂತೆ ಈ ಸಲ ಅವರ ಕ್ಷೇತ್ರದಲ್ಲಿ ಹಾಸ್ಟೆಲ್‌ನ್ನು ಪ್ರಾರಂಭಿಸಲಾಗುತ್ತದೆ.

ಶ್ರೀ ಎ.ಯೋಗೇಶ್ ಭಟ್:- ಇದರ ಬಗ್ಗೆ ಒಂದು ಸ್ಪಷ್ಟೀಕರಣ ಕೇಳಬೇಕಾಗಿದೆ. ಇಷ್ಟು ವರ್ಷಗಳಿಂದ ಅರ್ಧದಲ್ಲಿ ನಿಂತಿರುವ ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳ ಹಾಸ್ಟೆಲ್‌ಗಳು ಎಷ್ಟು ಇವೆಯೆಂದು ಸರ್ಕಾರ ಒಂದು ವಿವರಣೆಯನ್ನು ಕೊಡಬೇಕಾಗಿತ್ತು. ಸುಮಾರು ಒಂದೂವರೆ ವರ್ಷಗಳ ಹಿಂದೆ ಮಂಗಳೂರಿಗೆ ಮಾನ್ಯ ಸಚಿವರು ಬಂದಿದ್ದಾಗ, ಅಲ್ಲಿ ಒಂದು ಪರಿಶಿಷ್ಟ ವರ್ಗದ ಹಾಸ್ಟೆಲನ್ನು ಉದ್ಘಾಟನೆ ಮಾಡಿದ್ದರು, ಅಲ್ಲಿಂದ ಇಲ್ಲಿಯವರೆಗೆ ವಿದ್ಯಾರ್ಥಿಗಳು ಅಲ್ಲಿ ಇರುವುದಕ್ಕೆ ಅನುಕೂಲ ಮಾಡಿಕೊಡಿ ಎಂದು ಕೇಳಿದ್ದರೂ ಇನ್ನೂ ಮಾಡಿಲ್ಲ. ಸನ್ಮಾನ್ಯ ರಮೇಶ್ ಜಿಗಜಿಣಗಿಯವರು ಸ್ವತಃ ಅಲ್ಲಿಗೆ ಭೇಟಿ ಕೊಟ್ಟು ಬಂದಿದ್ದಾರೆ. ಇದರ ಬಗ್ಗೆ ಸರ್ಕಾರ ಏನು ಕ್ರಮ ಕೈಗೊಳ್ಳುತ್ತದೆ?

ಶ್ರೀ ಕೆ.ಎಂ.ಕೃಷ್ಣರೆಡ್ಡಿ:- ಮಾನ್ಯ ಅಧ್ಯಕ್ಷರೆ, ಅದರ ಬಗ್ಗೆ ಮಾಹಿತಿ ಒದಗಿಸಿದರೆ, ನಾನು ಕ್ರಮ ತೆಗೆದುಕೊಳ್ಳುತ್ತೇನೆ. ಅವರು ಹೇಳಿದ ಸಂದರ್ಭದಲ್ಲಿ ನಾನು ಮಂತ್ರಿಯಾಗಿರಲಿಲ್ಲ.

ವಿಷಯ:- ವೈಜ್ಞಾನಿಕವಾಗಿ ಮನೆಗಂದಾಯ ನಿಗದಿ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 72 (286)

ಶ್ರೀ ಕೆ.ಎಸ್.ಈಶ್ವರಪ್ಪ (ಶಿವಮೊಗ್ಗ):- ಮಾನ್ಯ ಪೌರಾಡಳಿತ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

1) ರಾಜ್ಯದಲ್ಲಿ ಪುರಸಭೆ: ನಗರಸಭೆಗಳಲ್ಲಿ ವೈಜ್ಞಾನಿಕವಾಗಿ ಮನೆ ಕಂದಾಯ ನಿಗಧಿಪಡಿಸಲು ಸಮಿತಿ ನೇಮಿಸಲಾಗಿದೆಯೇ?

2) ಆ ಸಮಿತಿ ಮನೆಗಂದಾಯ ನಿಗಧಿಪಡಿಸಲು ಯಾವುದಾದರೂ ಸೂತ್ರ ತಿಳಿಸಿದಿಯೇ?